ಇ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (399)267
ಸದಸ್ಯರ ಹೆಸರು : ಶ್ರೀ.ವಿ.ಸೋಮಣ್ಣ
ಉತ್ತರಿಸುವ ಸಚಿವರು : (ಶ್ರೀ.ಆರ್.ಅಶೋಕ್)
: ಮಾನ್ಯ ಸಾರಿಗೆ ಸಚಿವರು

ಅ) ಬೆಂಗಳೂರು ನಗರದಲ್ಲಿ ಪ್ರತಿ ದಿನ ಹಾಲಿ ಸಂಚರಿಸುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

75,247

ಆ) ಹೊಸದಾಗಿ ಆಟೋರಿಕ್ಷಾ ಪರವಾನಗಿ ನೀಡಲು ಸರ್ಕಾರ ನಿರ್ಧರಿಸಿದೆಯೇ?

ಹೌದು.

ಇ) ಹಾಗಿದ್ದಲ್ಲಿ, ಹೊಸದಾಗಿ ಎಷ್ಟು ಆಟೋರಿಕ್ಷಾಗಳಿಗೆ ಪರವಾನಗಿಗಳನ್ನು ನೀಡಲಾಗುವುದು?

ದಿನಾಂಕ: **25–3–2008**ರಲ್ಲಿ ಸರ್ಕಾರವು ಹೊಸದಾಗಿ **5000** ಆಟೋರಿಕ್ಷಾ ರಹದಾರಿಗಳನ್ನು ನೀಡಲು ಮಂಜೂರಾತಿ ನೀಡಿರುತ್ತದೆ.

ಈ) ಈ ಪರವಾನಗಿಯನ್ನು ನೀಡುವಾಗ ಅನುಸರಿಸುವ ಮಾನದಂಡಗಳೇನು?

ಮೋಟಾರು ವಾಹನ ಕಾಯ್ದೆ **1988**ರ ಕಲಂ **74** ರಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ನು ಮತ್ತು ಈ ಕೆಳಕಂಡ ಷರತ್ತು ವಿಧಿಸಿ ರಹದಾರಿ ಗಳನ್ನು ನೀಡಲಾಗುತ್ತದೆ.

1. ವಾಯುಮಾಲಿನ್ಯ ಮತ್ತು ಶಬ್ದಮಾಲಿನ್ಯ ಉಂಟುಮಾಡದೆ ಇರುವಂತಹ ಹೊಸ 4 ಸ್ಟ್ರೋಕ್ ಇಂಜಿನ್ ಉಳ್ಳ ಮತ್ತು ಅಧಿಕೃತ ಎಲ್.ಪಿ.ಜಿ.ಕಿಟ್ ಅಳವಡಿಸಿರುವ ವಾಹನಗಳಿಗೆ ಮಾತ್ರ ರಹದಾರಿಗಳನ್ನು ನೀಡುವುದು.
2. ಆಟೋರಿಕ್ಷಾ ಓಡಿಸಲು ಚಾಲನಾ ಅನುಜ್ಞಾಪತ್ರ ಹೊಂದಿರತಕ್ಕಂತಹ ಅಭ್ಯರ್ಥಿಗಳಿಗೆ ರಹದಾರಿಗಳನ್ನು ಮಂಜೂರು ಮಾಡುವುದು.
3. ರಹದಾರಿಗಾಗಿ ಅರ್ಜಿ ಸಲ್ಲಿಸುವವರು ವಿಳಾಸ ಪುರಾವೆಗಾಗಿ ಕೆಳಕಂಡ ಯಾವುದಾದರೂ ಒಂದು ದಾಖಲೆಯನ್ನು ಒದಗಿಸುವುದು.

1)ವೋಟರ್ ಐಡೆಂಟಿಟಿ ಕಾರ್ಡ್, 2)ಪಡಿತರ ಚೀಟಿ, 3)ಪಾಸ್‌ಪೋರ್ಟ್,
4)ಆದಾಯ ತೆರಿಗೆ ಸಲ್ಲಿಸಿರುವ ಪ್ರತಿ, 5)ಎಲೆಕ್ಟ್ರಿಸಿಟಿ ಬಿಲ್, 6)ವಾಟರ್ ಬಿಲ್.

ಉ) ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿನ ಶಾಸಕರ ಅಭಿಪ್ರಾಯವನ್ನು ಪಡೆದು ಆ ಕ್ಷೇತ್ರದಲ್ಲಿನ ಅರ್ಹರಿಗೆ ಈ ಪರವಾನಗಿಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ವಿಧಾನ ಸಭಾ ಕ್ಷೇತ್ರದಲ್ಲಿನ ಶಾಸಕರ ಅಭಿಪ್ರಾಯವನ್ನು ಪಡೆದು ಆ ಕ್ಷೇತ್ರದಲ್ಲಿನ ಅರ್ಹರಿಗೆ ಈ ಪರವಾನಗಿಯನ್ನು ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (440)269
ಮಾನ್ಯ ಸದಸ್ಯರ ಹೆಸರು : ಶ್ರೀ. ಶ್ರೀನಿವಾಸ್.ಎಂ (ಮಂಡ್ಯ)
ಉತ್ತರಿಸುವ ಸಚಿವರು : (ಶ್ರೀ.ಸಿ.ಎಂ.ಉದಾಸಿ)
: ಮಾನ್ಯ ಲೋಕೋಪಯೋಗಿ ಸಚಿವರು

ಅ) ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿ ಮಂಡ್ಯ ನಗರದ ಬೈಪಾಸ್ ಮುಖಾಂತರ ಹಾದುಹೋಗುವ ಪ್ರಸ್ತಾವನೆ ಕುರಿತು ಸರ್ಕಾರ ಕೈಗೊಂಡ ತೀರ್ಮಾನಗಳೇನು;

ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಮಂಡ್ಯ ನಗರಕ್ಕೆ 11.60 ಕಿಮೀ. ಉದ್ದದ ಬೈಪಾಸ್ ರಸ್ತೆ ನಿರ್ಮಾಣವನ್ನು 102 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ತೆಗೆದುಕೊಳ್ಳಲು ಯೋಜಿಸಲಾಗಿದ್ದು, ಇದಕ್ಕಾಗಿ ಯೋಜನಾ ವರದಿಯನ್ನು ತಯಾರಿಸಲಾಗಿದೆ.

ಆ) ಹಾಗಿದ್ದಲ್ಲಿ, ಸರ್ವೆ ಕಾರ್ಯಗಳು ಮುಗಿದಿದ್ದರೂ ಅದು ಕಾರ್ಯ ರೂಪಕ್ಕೆ ಬಾರದಿರಲು ಕಾರಣಗಳೇನು;

ಈ ಕಾಮಗಾರಿಯ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ವಿಚಾರದಲ್ಲಿ ಸರ್ಕಾರದ ನಿಲುವುಗಳೇನು?

ಈ ಕಾಮಗಾರಿಯನ್ನು ಅನುದಾನದ ಲಭ್ಯತೆ ಮೇರೆಗೆ ಕೈಗೊಳ್ಳಲು ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (441)270
ಸದಸ್ಯರ ಹೆಸರು : ಶ್ರೀ.ಶ್ರೀನಿವಾಸ್ ಎಂ. (ಮಂಡ್ಯ)
ಉತ್ತರಿಸುವ ಸಚಿವರು : (ಶ್ರೀ.ಎಸ್.ಸುರೇಶ್‌ಕುಮಾರ್)
: ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಅ. ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಪೂರಕ ಅಂದಾಜುಗಳ ಎಸ್‌ಎಫ್‌ಸಿ ಅನುದಾನ ಬಿಡುಗಡೆ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ?

ಹೌದು